**ಸಾಕ್ಷಿಯನ್ನು ದಿನಾಂಕ 08.01.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ನಾನು ಯಾವುದೇ ಪೈನಾನ್ಸ್ ಅನ್ನು ಮಾಡುವುದಿಲ್ಲ. ನಾನು ಬಾರಿನಲ್ಲಿ ಕ್ಯಾಶಿಯರ್ ಜೊತೆಗೆ ಪೈನಾನ್ಸ್ ಅನ್ನು ಸಹ ಮಾಡುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹೇಳಿರುವಂತಹ ವ್ಯವಹಾರವೇ ನಾನು ಮೊದಲ ಬಾರಿ ಆರೋಪಿಯೊಂದಿಗೆ ಮಾಡಿರುವುದು. ನಗದು ನಾಲ್ಕು ಲಕ್ಷ ಹಣವನ್ನು ಆರೋಪಿಗೆ ಕೊಟ್ಟಿಲ್ಲ, ಆಕೆಯ ಗಂಡನಿಗೆ ಕೊಟ್ಟಿರುವುದು ಎಂದರೆ ಸರಿಯಲ್ಲ, ಇಬ್ಬರು ಇದ್ದರು. ಹಣ ಕೊಟ್ಟಾಗ ಆರೋಪಿ ಇರಲಿಲ್ಲ. ನಾನು ಆರೋಪಿಯ ಗಂಡನಿಗೆ ಹಣ ಕೊಟ್ಟಿರುವುದು ಎಂದರೆ ಇಬ್ಬರು ಇದ್ದರು, ಹಣವನ್ನು ಸುರೇಶ್ ಸಿಂಗ್ ಕೈಯಲ್ಲಿ ಕೊಟ್ಟೆ. ಆರೋಪಿ ಮತ್ತು ಆಕೆಯ ಗಂಡನನ್ನು ಹೊರತುಪಡಿಸಿ ಯಾರಿಗೂ ನಾನು ಕೈ ಸಾಲ ಕೊಟ್ಟಿಲ್ಲ. ಆರೋಪಿಯ ಅಂಗಡಿ ಪಕ್ಕದಲ್ಲಿ ಇರುವಂತಹ ಜನರಿಗೂ ಸಹ ನಾನು ಪೈನಾನ್ಸ್ ಕೊಟ್ಟಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಿ.ಪಿ.1 ಚೆಕ್ ಅನ್ನೇ ಆರೋಪಿಯೇ ಕೊಟ್ಟಿರುವುದು. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿಪಿ.1ರದಲ್ಲಿ ಒಕ್ಕಣೆಯ ಬರವಣಿಗೆಗೂ ಆರೋಪಿಯ ಸಹಿಯ ಬರವಣಿಗೆಗೂ ವ್ಯತ್ಯಾಸ ಇದೆ ಎಂದರೆ ಗೊತ್ತಿಲ್ಲ. ಆರೋಪಿಯು ಭದ್ರತೆಗಾಗಿ ಕೊಟ್ಟಿರುವಂತಹ ಚೆಕ್ ಅನ್ನು ನಾನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪ್ರಕರಣವನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಗಂಡನಿಗೆ ಕೊಟ್ಟಿರುವ ಸಾಲಕ್ಕೆ ಆರೋಪಿಯಿಂದ ಭದ್ರತೆಗಾಗಿ ನಿ.ಪಿ. 1ಚೆಕ್ ಅನ್ನು ಪಡೆದು ಈ ಸುಳ್ಳು ಪ್ರಕರಣವನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
**ಬೆಂಗಳೂರು.**